ಮಾಡಿರತಕ್ಕದ್ದು. 13, 15, 18ನೇ ತಾರೀಖು ಚುನಾವಣೆಯಾಯಿತು. ನಾವು ನಿಷೇಧ ಮಾಡಿರತಕ್ಕದ್ದು 17ನೇ ತಾರೀಖು. ಲಾ ಅಂಡ್ ಆರ್ಡರ್ ಪಾಯಿಂಟ್‌ನಿಂದ ಮಾಡಿದ್ದೇವೆ.

ಅಧ್ಯಕ್ಷರು : ಮ್ಯಾಟರ್ ಈಸ್ ಕ್ಲೋಸ್ಡ್.

(ii) ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀ ವಾಟಾಳ್ ನಾಗರಾಜ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ತೊಂದರೆಯಾಗಿರುವ ಬಗ್ಗೆ ಅದರಲ್ಲೂ ವಿಶೇಷವಾಗಿ ಚಾಮರಾಜನಗರ ತಾಲ್ಲೂಕಿನಲ್ಲಿ ಆಗಿರತಕ್ಕ ವಿಶೇಷ ಪರಿಸ್ಥಿತಿಯ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ) : ನವೆಂಬರ್ 94 ರಿಂದ ರಾಜ್ಯದ ವಿದ್ಯುತ್ ಬೇಡಿಕೆಯು ಏಕಪ್ರಕಾರವಾಗಿ ಹೆಚ್ಚುತ್ತಲ್ಲಿದ್ದು, ಈ ತಿಂಗಳಿನಲ್ಲಿ, ದಿನವಹಿ ವಿದ್ಯುತ್ ಬಳಕೆಯ ಪ್ರಮಾಣ 66 ದಶಲಕ್ಷ ಯೂನಿಟ್‌ಗಳಷ್ಟು ಗರಿಷ್ಠ ಪ್ರಮಾಣವನ್ನು ಮುಟ್ಟಿತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ ವಿದ್ಯುತ್ ಬಳಕೆಯ ಪ್ರಮಾಣ 59 ದಶಲಕ್ಷ ಯೂನಿಟ್‌ನಷ್ಟು ಮಾತ್ರ ಇದ್ದಿತ್ತು. ಪೀಕ್ ಲೋಡ್ ಸಹ ಈಗ 3243 ಮೆ.ವ್ಯಾ. ನ್ನು ಮುಟ್ಟಿದ್ದು ಕಳೆದ ವರ್ಷ ಇದು ಕೇವಲ 2919 ಮೆ.ವ್ಯಾಟ್‌ನಷ್ಟು ಮಾತ್ರ ಆಗಿದ್ದಿತ್ತು.

ಲಭ್ಯವಿರುವ ವಿದ್ಯುತ್ ಉತ್ಪಾದನೆ ಪ್ರಮಾಣ ಸೀಮಿತವಾಗಿದ್ದರೂ ಸಹ, ದಕ್ಷಿಣ ವಲಯದ ಎಲ್ಲಾ ರಾಜ್ಯಗಳಲ್ಲಿ ಕಳೆದ ವಾರಗಳಲ್ಲಿ ವಿದ್ಯುತ್‌ಬಳಕೆಯ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಹೆಚ್ಚಳಗೊಂಡಿದೆ. ಇದಕ್ಕೆ ಮುಖ್ಯ ಕಾರಣ ಬೇಸಿಗೆ ಕಾಲ ಪ್ರಾರಂಭವಾಗಿರುವುದರಿಂದ ವಿದ್ಯುತ್‌ನ್ನು ಬಳಸುತ್ತಿರುವ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಬಹಳ ಹೆಚ್ಚಳಗೊಂಡಿರುವುದು. ಇದರ ಪರಿಣಾಮವಾಗಿ ದಕ್ಷಿಣ ವಲಯದ ಗ್ರಿಡ್ ವ್ಯವಸ್ಥೆಯು ಬಹಳ ಕಳವಳಕಾರಿ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಸೋಮನಹಳ್ಳಿ 400 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಸ್ವೀಕೃತವಾಗುತ್ತಿರುವ ವಿದ್ಯುತ್ತಿನ ವೋಲ್ಟೇಜ್ ಪೀಕ್ ವೇಳೆಗಳಲ್ಲಿ 400 ಕೆವಿ ಮಟ್ಟದಲ್ಲಿ ಇರಬೇಕಾದ ವೋಲ್ಟೇಜ್ 285 ರಿಂದ 300 ಕೆವೆಯಷ್ಟು ಕಡಿಮೆಗೊಳ್ಳುತ್ತಿದೆ. ಸೋಮನಹಳ್ಳಿಯಲ್ಲಿ ಕಡಿಮೆ ವೋಲ್ಟೇಜ್‌ನಲ್ಲಿ ವಿದ್ಯುತ್ ಸ್ವೀಕೃತವಾಗುತ್ತಿರುವುದರಿಂದ ಬೆಂಗಳೂರು, ಕೋಲಾರ, ತುಮಕೂರು ಮತ್ತು ಮೈಸೂರುಗಳ ವಿದ್ಯುತ್ ಗ್ರಾಹಕರು ಬಹಳ ತೊಂದರೆಗೆ ಒಳಪಟ್ಟಿದ್ದಾರೆ.

ದಕ್ಷಿಣ ಗ್ರಿಡ್ ವ್ಯವಸ್ಥೆಯಲ್ಲಿನ ಕಡಿಮೆ ವೋಲ್ಟೇಜ್ ಮತ್ತು ಕಡಿಮೆ ಫ್ರಿಕ್ವೆನ್ಸಿಯಿಂದಾಗಿ ಈ ತಿಂಗಳಿನಲ್ಲಿ ಮಾರ್ಚ್ 16ರಿಂದ ಮಾರ್ಚ್ 19ರ 5 ದಿವಸಗಳ ಅವಧಿಯಲ್ಲಿ ಮೂರು ಬಾರಿ ಗ್ರಿಡ್‌ನ ಕುಸಿತ ಉಂಟಾಯಿತು. ಇದರಿಂದಾಗಿ ರಾಜ್ಯದಲ್ಲಿ ಅಲ್ಲದೆ ತಮಿಳುನಾಡು, ಆಂಧ್ರ ಪ್ರದೇಶದ ಕೆಲವು ಭಾಗಗಳಲ್ಲಿ ವಿದ್ಯುತ್ ಸರಬರಾಜು ಅಸ್ತವ್ಯಸ್ತವಾಯಿತು. ಗ್ರಿಡ್ ಅಸ್ತವ್ಯಸ್ತಗೊಳ್ಳುವಿಕೆ, ಮುಖ್ಯ ಕಾರಣ ಆಂಧ್ರ ಪ್ರದೇಶವು ತನ್ನ ಪಾಲಿಗೂ ಮೀರಿ, ಕೇಂದ್ರ ಉತ್ಪಾದನಾ ಯೋಜನೆಗಳಿಂದ ವಿದ್ಯುತ್ತನ್ನು ತೆಗೆದುಕೊಳ್ಳುತ್ತಿರುವುದು, ಹೆಚ್ಚಿನ ಪ್ರಮಾಣದ ಇಂಡಕ್ಟೀವ್ (Inductive load) ಲೋಡನಿಂದಾಗಿ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವದಿಂದ ಸುಮಾರು 4 ರಿಂದ 5 ಕೋಟಿ ರೂಪಾಯಿಯ ಬೆಳೆ ನಾಶವಾಗತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ. ಈ ಪರಿಸ್ಥಿತಿಯನ್ನು ನಿವಾರಣೆ ಮಾಡಲಿಕ್ಕೆ ತರಾತುರಿಯ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. ಮತ್ತು ಈಗಾಗಲೇ ಚಂದಕವಾಡಿಲ್ಲಿ ಒಂದು ವಿದ್ಯುತ್ ಉಪಕೇಂದ್ರವನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಹರವೆಯಲ್ಲಿ ಈಗಾಗಲೇ ಸ್ಥಾಪನೆಯಾಗಿ, ಕೆಲಸ ಪ್ರಾರಂಭವಾಗಿದೆ. ಸಂತೆಮಾರನಹಳ್ಳಿ, ಹರವೆ ಮತ್ತು ಚಂದಕವಾಡಿ ಈ ಮೂರೂ ಕೂಡ ಹಿಂದೆ ಆಗಿರತಕ್ಕಂಥಾದ್ದು. ತಾವು ಬರೀ ಚಂದಕವಾಡಿ ಬಗ್ಗೆ ಮಾತ್ರ ಹೇಳಿದ್ದೀರಿ. ಸಂತೆಮಾರಹಳ್ಳಿಯದ್ದು ಯೋಜನೆ ಪ್ರಾರಂಭವಾಗಿದೆ. ಸರ್ಕಾರ ಯಾವ ಆಧಾರದಮೇಲೆ ಇಲ್ಲಿ ನಿವೇಶನಗಳ ಬಗ್ಗೆ ಹಣ ಕೊಡಬೇಕಾಗಿದೆಯೋ ಅದನ್ನು ಕೊಡಿ. ಮುಖ್ಯವಾಗಿ ನಮಗೆ ಬೇಕಾಗಿರುವುದು ಏನೆಂದರೆ ವ್ಯವಸ್ಥೆ ಕೂಡಲೇ ಆಗಬೇಕು. ಇದು ಕೇವಲ ಚಾಮರಾಜನಗರ ಒಂದೇ ಅಲ್ಲ, ಇಡೀ ಕರ್ನಾಟಕದ ಪ್ರತಿ ಹಳ್ಳಿಯಲ್ಲೂ ಈ ಪರಿಸ್ಥಿತಿ ಉದ್ಭವವಾಗಿರುವುದು ತಮಗೆ ಗೊತ್ತಿದೆ. ತಾವು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿರುವುದಾಗಿ ಹೇಳಿದ್ದೀರಿ, ಕೇಂದ್ರದ ವಿದ್ಯುತ್ ಸಚಿವರನ್ನು ಕೂಡ ಭೇಟಿ ಮಾಡಿರುವುದಾಗಿ ತಿಳಿಸಿದ್ದೀರಿ. ಅಲ್ಲಿಂದ ಉತ್ತರ ಏನು ಬಂದಿದೆ? ಅವರು ಯಾವರೀತಿ ತಮಗೆ ಸ್ಪಂದಿಸಿದ್ದಾರೆ ಎಂಬುದನ್ನು ತಿಳಿಸಬೇಕು. ಈ ವಿಷಯದಲ್ಲಿ ಕರ್ನಾಟಕ ಬಗ್ಗೆ ಮಲತಾಯಿ ಧೋರಣೆ ತಾಳಿದೆ ಎಂದು ಇಲ್ಲಿ ಅನೇಕಸಾರಿ ಚರ್ಚೆ ಮಾಡುವಾಗ ತಮ್ಮ ಗಮನಕ್ಕೆ ತಂದಿದ್ದೇವೆ. ಅನೇಕ ವಿದ್ಯುತ್ ಯೋಜನೆಗಳನ್ನು ಬಹಳ ಹಿಂದಿನಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟರೂ ಕೂಡ ಅವರು ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ ಎಂಬುದು ಮೊದಲಿನಿಂದಲೂ ನಮ್ಮ ವಾದವಾಗಿದೆ. ಈಗ ಕೊಟ್ಟಿರತಕ್ಕಂಥ ಮನವಿಗೆ ಯಾವ ರೀತಿ ಉತ್ತರ ದೊರೆತಿದೆ ಎಂದು ತಾವು ಹೇಳಬೇಕು.

ಶ್ರೀ ಜೆ.ಹೆಚ್. ಪಟೀಲ್ : ಬೇರೆ ಕಡೆಗೆ ಹೋಲಿಸಿದರೆ ಚಾಮರಾಜನಗರದಲ್ಲಿ ಪರಿಸ್ಥಿತಿ ಉತ್ತಮವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮನ್ನು ಕರೆದುಕೊಂಡು ಹೋಗಬೇಕೆಂದು ಮಾಡಿದ್ದೇನೆ. ಆರೂವರೆ ಗಂಟೆಗೆ ಹೋದಾಗ ಅಲ್ಲಿಯ ನಿಜವಾದ ಪರಿಸ್ಥಿತಿ ಏನೆಂಬುದು ತಮಗೆ ಗೊತ್ತಾಗುತ್ತದೆ. ನಾನು ಈ ಸಭೆಯ ಮೂಲಕ, ಮಾನ್ಯ ಅಧ್ಯಕ್ಷರ ಮೂಲಕ ತಮಗೆ ಆಹ್ವಾನವನ್ನು ಕೊಡುತ್ತಿದ್ದೇನೆ. ತಾವು ದಯಮಾಡಿ ನನ್ನ ಜೊತೆಗೆ ಬಂದರೆ ಉತ್ತಮವೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಜೆ.ಹೆಚ್. ಪಟೀಲ್ : ಈಗ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಬಗ್ಗೆ ಮಾನ್ಯ ಸದಸ್ಯರು ಕೇಳಿದರು. ನಾನು ಮಾನ್ಯ ಎನ್.ಟಿ. ರಾಮರಾಯರ ಜೊತೆ ಮಾತನಾಡಿದರೂ ಕೂಡ ಆ ಅಧಿಕಾರಿಗಳು ಸರಿಯಾಗಿ ವರ್ತಿಸುತ್ತಿರಲಿಲ್ಲ. ಕಡೆಗೆ ಕೇಂದ್ರ ಸರ್ಕಾರದವರು ಇಂಟರ್‌ವೀನ್ ಆಗಿ ಎನರ್ಜಿ ಮಿನಿಸ್ಟ್ರಿ ಸೆಕ್ರೆಟರಿಯವರು ಫೋನ್ ಮಾಡಿದಮೇಲೆ ಅಲ್ಲಿಂದ ಸ್ವಲ್ಪ ಇಂಪ್ರೂವ್ ಆಯಿತು. ಆದರೆ ಅದು ಕೆಲವು ದಿವಸ ಮಾತ್ರ. ಮತ್ತೆ ಈಗ ಓವರ್ ಡ್ರಾಫ್ಟ್ - ಅಂದರೆ ಆಂಧ್ರಪ್ರದೇಶದವರು ತಮ್ಮ ಪಾಲಿಗಿಂತ ಹೆಚ್ಚಾದುದನ್ನು ಯಾವಾಗಲೂ ತೆಗೆದುಕೊಳ್ಳುತ್ತಿದ್ದಾರೆ ಎನ್ನುವ ಕಾರಣಕ್ಕೋಸ್ಕರ ತಮಿಳುನಾಡು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಸದರ್ನ್ ಗ್ರಿಡ್‌ನಿಂದ ಹೊರಗೆ ಹೋಗುತ್ತೇವೆ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಈಗ ನಾವು ಕೂಡ ಆ ಮಟ್ಟಕ್ಕೆ ಬರಬೇಕಾಗುತ್ತದೆ. ಆಂಧ್ರ ಪ್ರದೇಶದವರು ತಮ್ಮ ಪಾಲಿಗಿಂತ ಹೆಚ್ಚು ಬಳಸುವುದನ್ನು ಕೈಬಿಡಿದಿದ್ದರೆ, ಹಾಗೂ ಅವರು ಸೆಂಟ್ರಲ್ ಎನರ್ಜಿ ಮಿನಿಸ್ಟರ್

ಅವರ ಸೂಚನೆ ಪ್ರಕಾರ ಅಥವಾ ಈ ಸದರ್ನ್ ಗ್ರಿಡ್‌ವಿನಿದೆ, ಅದರ ನಿಯಮಗಳ ಪ್ರಕಾರ ವರ್ತಿಸದಿದ್ದರೆ ನಾವು ತೀವ್ರವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ತೆಗೆದುಕೊಂಡರೆ ತತ್‌ಕ್ಷಣ ನಮ್ಮ ಸ್ಥಿತಿ ಇಂಪ್ರೂವ್ ಆಗುತ್ತದೆ ಎಂದಲ್ಲ. ನಮ್ಮ ರಾಜ್ಯದ ಪರಿಸ್ಥಿತಿಯನ್ನು ಇಂಪ್ರೂವ್ ಮಾಡುವುದಕ್ಕೆ ಒಂದು, ಜನರೇಷನ್ ಜಾಸ್ತಿಯಾಗಬೇಕು. ಮತ್ತು ಟ್ರಾನ್ಸಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಈ ಎರಡು ವರ್ಷಕ್ಕೆ ಮಾಡಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡ್‌ನವರು ಸುಮಾರು 400 ಕೋಟಿ ರೂಪಾಯಿಯಷ್ಟು ಸಾಲವನ್ನು ತೆಗೆದುಕೊಂಡು ಟ್ರಾನ್ಸಮಿಷನ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಅನ್ನು ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

(ಉಪಾಧ್ಯಕ್ಷರು (ಶ್ರೀ ವಿ.ಎಸ್. ಪಾಟೀಲ್) ಪೀಠವನ್ನಲಂಕರಿಸಿದರು)

ಆದರೂ ನಮಗೆ ಇನ್ನೂ ಸುಮಾರು ಎಂಟುನೂರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದನ್ನು ಎಲ್ಲಾದರೂ ಸಾಲ ತಂದು, ಕೆಲಸ ಮಾಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ವಿಷಯ ಹೇಳುತ್ತೇನೆ.

ಉಪಾಧ್ಯಕ್ಷರು : ಮುಂದಿನ ವಿಷಯದಲ್ಲಿ ತಮಗೆ ಅವಕಾಶ ಮಾಡಿಕೊಡುತ್ತೇನೆ. ನಿಯಮ 69ರ ಪ್ರಕಾರ ವಿದ್ಯುಚ್ಛಕ್ತಿಯ ವಿಷಯವೇ ಚರ್ಚೆಗೆ ಬರುತ್ತಿದೆ, ಇದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಇಡೀ ರಾಜ್ಯದಲ್ಲಿನ ವಿದ್ಯುತ್ ಅಭಾವದ ಬಗ್ಗೆ ಚರ್ಚೆ ನಡೆಯುತ್ತಿದೆ. ಇವತ್ತು ಎಲ್ಲಿ ವಿದ್ಯುತ್ ತಯಾರಾಗುತ್ತಿದೆ, ಅಲ್ಲಿ ಸಾವಿರಾರು ಜನ ರೈತರು ಮುಳುಗಡೆಯಾಗುತ್ತಿದ್ದಾರೆ. ಆ ಮಜರೆ ಗ್ರಾಮಗಳಿಗೆ ವಿದ್ಯುತ್ ಕೊಟ್ಟಿಲ್ಲ. 1981ರ ಜನಗಣತಿ ಪ್ರಕಾರ 511 ಮಜರ್ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಕೊಟ್ಟಿಲ್ಲ....

ಉಪಾಧ್ಯಕ್ಷರು : ಗಮನ ಸೆಳೆಯುವ ಸೂಚನೆ ಮೇಲೆ ಬೇರೆಯವರು ಮಾತನಾಡುವುದಕ್ಕೆ ಬರುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ. ಮುಂದೆ ಇದೇ ವಿಷಯ ಚರ್ಚೆಗೆ ಬರುತ್ತಿದೆ. ಆಗ, ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ಮಾನ್ಯ ವಾಟಾಳ್ ನಾಗರಾಜ್ ಅವರೇ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಚಂದಕವಾಡಿ ಮತ್ತು ಸಂತೆಮಾರನಹಳ್ಳಿಯಲ್ಲಿ ಎಲ್ಲಾ ವ್ಯವಸ್ಥೆ ರೆಡಿ ಇದೆ. ಯಾವಾಗ ಕಾರ್ಯವನ್ನು ಪ್ರಾರಂಭ ಮಾಡುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್ : ಹರವೆನಲ್ಲಿ ಈಗಾಗಲೇ ಕೆಲಸ ಶುರುವಾಗಿದೆ, ಸಂತೆಮಾರನಹಳ್ಳಿಯಲ್ಲಿ ಸಧ್ಯದಲ್ಲಿಯೇ ಶುರು ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಚಂದಕವಾಡಿ ಮತ್ತು ಸಂತೆಮಾರನಹಳ್ಳಿ ಯಾವಾಗ ಕೆಲಸ ಶುರು ಮಾಡುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್ : ಚಂದಕವಾಡಿಗೆ ವರ್ಕ್ಸ್ ಸ್ಯಾಂಕ್ಷನ್ ಆಗಿದೆ, 70 ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದ್ದೇವೆ. ಇದರ ಜೊತೆಗೆ ಸಂತೆಮಾರನಹಳ್ಳಿಯದೂ ಸ್ಯಾಂಕ್ಷನ್ ಮಾಡಿದ್ದೇವೆ. ಇನ್ನು ಮೂರು ತಿಂಗಳಲ್ಲಿ ಕೆಲಸ ಶುರು ಮಾಡುತ್ತೇವೆ.